# 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.

**ಸಿ ಸಿ ಸಂಃ 293/2022**

| | | |
|---|---|---|
| ಸಾಕ್ಷಿಯ ಹೆಸರುಃ | ಡಾ. ಅನಿಲ್ ಕುಮಾರ್ | ಪ್ರಾಸಾಃಃ 9 |
| ತಂದೆಯ ಹೆಸರುಃ | ರಾಮಚಂದ್ರ | ಚಾಸಾಃಃ 12 |
| ವಯಸ್ಸುಃ | 52 ವರ್ಷ | ಪ್ರಮಾಣೀಕರಿಸಿದ ದಿಃ 04/11/2025 |
| ಉದ್ಯೋಗಃ | ತಜ್ಞ ವೈದ್ಯರು, ಸಾರ್ವಜನಿಕ ಆಸ್ಪತ್ರೆ, ಹುಣಸೂರು | |
| ವಾಸ ಸ್ಥಳಃ | ಹುಣಸೂರು | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರಿಂದಃ**

ನಾನು 2010 ರಿಂದ ಜುಲೈ 2025 ರವರೆಗೆ ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ತಜ್ಞ ವೈಧ್ಯರಾಗಿ ಕೆಲಸ ನಿರ್ವಹಿಸುತ್ತಿದ್ದೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕಃ 16.01.2022 ರಂದು ಬೆಳಿಗ್ಗೆ 10.45 ಗಂಟೆ ಸಮಯದಲ್ಲಿ ರಾಕೇಶ್ ರವರು ಹಲ್ಲೆಯ ಹಿನ್ನೆಲೆಯಲ್ಲಿ ಪುನೀತ್ ಮತ್ತು ಅನಿಲ್ ರವರು ಕಲ್ಲಿನಿಂದ ಮತ್ತು ಸೌದೆ ಬಡಿಯಿಂದ ಹಲ್ಲೆ ಮಾಡಿದ್ದಾರೆಂದು ಚಿಕಿತ್ಸೆಗೋಸ್ಕರ ನನ್ನ ಮುಂದೆ ಹಾಜರಾಗಿದ್ದರು. ನಾನು ಅವರನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡುಬಂದಿರುತ್ತವೆ.

1. ಬಲದ ಕೈಯಲ್ಲಿ 3x2 ಸೆ.ಮೀ ತರುಚಿದ ಗಾಯ,
2. ಬಲದ ಮಂಡಿಯಲ್ಲಿ 3x2 ಸೆ.ಮೀ. ತರುಚಿದ ಗಾಯ,
3. ಎಡಬುಜದಲ್ಲಿ ನೋವು
4. ಎಡಗೈಯಲ್ಲಿ 2x1 ಸೆ.ಮೀ. ತರುಚಿದ ಗಾಯ,

5. ಬೆನ್ನಿನ ಬಲಭಾಗದಲ್ಲಿ 4x3 ಸೆ.ಮೀ. ತರುಚಿದ ಗಾಯ,

ಮೇಲ್ಕಂಡ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ. ನಾನು ಮೂಳೆ ತಜ್ಞರಿಂದ ಅವರ ಅಭಿಪ್ರಾಯವನ್ನು ಪಡೆದಿರುತ್ತೇನೆ. ಈ ಸಂಬಂಧ ನಾನು ಗಾಯದ ಪ್ರಮಾಣ ಪತ್ರವನ್ನು ಪೋಲೀಸರಿಗೆ ನೀಡಿರುತ್ತೇನೆ. ಸಾಕ್ಷಿಯು ನಿಪಿ–8 ಗಾಯದ ಪ್ರಮಾಣ ಪತ್ರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.8(ಬಿ)** ಎಂದು ಗುರುತಿಸಲಾಯಿತು. ಮೇಲ್ಕಂಡ ಗಾಯಗಳು 6 ಗಂಟೆಗಳ ಒಳಗೆ ಆದಂತಹ ಗಾಯಗಳಾಗಿರುತ್ತವೆ. ಮು.ಮಾ–1 ರಿಂದ ಹಲ್ಲೆ ಮಾಡಿದರೇ ಮೇಲ್ಕಂಡ ಗಾಯಗಳು ಆಗುವ ಸಾಧ್ಯತೆ ಇದೆ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ ಎಂ ಸಿ ಹೆಚ್ ವಕೀಲರಿಂದಃ**

3. ತನಿಖಾಧಿಕಾರಿ ಕಲ್ಲು ಮತ್ತು ದೊಣ್ಣೆಯನ್ನು ನನ್ನ ಮುಂದೆ ಹಾಜರುಪಡಿಸಿ ಅಭಿಪ್ರಾಯವನ್ನು ಪಡೆದಿಲ್ಲ. ಮೇಲ್ಕಂಡ ಗಾಯಗಳು ಒಬ್ಬ ವ್ಯಕ್ತಿ ಗಟ್ಟಿಯಾದ ನೆಲದಲ್ಲಿ ಬಿದ್ದರೆ ಆಗುವ ಸಾಧ್ಯತೆ ಇವೆ. ಗಾಯಾಳುವಿಗೆ ಅನುಕೂಲ ಮಾಡಲು ಯಾವುದೇ ಚಿಕಿತ್ಸೆ ನೀಡದಿದ್ದರೂ ಸುಳ್ಳು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರ ಮಾತು ಕೇಳಿ ಆರೋಪಿತರಿಗೆ ತೊಂದರೆ ನೀಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹೆಃಸಿ.ನ್ಯಾ ಹಾಗೂ ಪ್ರ.ವ.ನ್ಯಾದಂ.**

**ಪಿರಿಯಾಪಟ್ಟಣ.**